# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ-139/2016/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 06/02/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ ಪರಶುರಾಮ್ ಶಿ. ಹಳ್ಳೂರ, ಪಿಲೇಕಮ್ಮ ನಗರ, ಮುದ್ದೇಬಿಹಾಳ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಪರಶುರಾಮ.ಶಿ.ಹಳ್ಳೂರ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಮುದ್ದೇಬಿಹಾಳ ತಾಲ್ಲೂಕಿನ ಹಳ್ಳೂರ ಗ್ರಾಮದಲ್ಲಿ ವಾಸವಿರುವ ಶ್ರೀ ಶಿವಪ್ಪ ಶೀತವ್ವ ಮಾದರ ಇವರು ಅವರ ಮನೆಯ ಪಕ್ಕದಲ್ಲಿನ ತಾರನಾಳ ರಸ್ತೆ ಹತ್ತಿರದ 100 x 100 ಅಡಿ ಅಳತೆಯ ಜಾಗವನ್ನು ಕಾನೂನುಬಾಹಿರವಾಗಿ ಅತಿಕ್ರಮಣ ಮಾಡಿದ್ದಾರೆಂದು, ಸದರಿ ಜಾಗವು ಸರ್ಕಾರಿ ಜಾಗವೋ ಅಥವಾ ಖಾಸಗಿ ಜಾಗವೋ ಎಂಬ ಬಗ್ಗೆ ಪರಿಶೀಲನೆ ಮಾಡಿ ವರದಿ ಸಲ್ಲಿಸಲು ಎದುರುದಾರರಿಗೆ ತಿಳಿಸಿದ್ದರೂ ಸಹ ಎದುರುದಾರರು ಯಾವುದೇ ಕ್ರಮ ಜರುಗಿಸಿರುವುದಿಲ್ಲ. ವಿಜಾಪುರದ ಉಪವಿಭಾಗಾಧಿಕಾರಿಗಳು, ಮುದ್ದೇಬಿಹಾಳನ ತಹಶೀಲ್ದಾರ್‌ರವರಿಗೆ ದೂರಿನ ಬಗ್ಗೆ ಖುದ್ದಾಗಿ ಸ್ಥಳ ಪರಿಶೀಲನೆ ಮಾಡಿ ಜಾಗವು ಸರ್ಕಾರಿ ಜಮೀನೋ ಅಥವಾ ಖಾಸಗಿ ಜಮೀನೋ ಎಂಬುದನ್ನು ಖಾತರಿಪಡಿಸಿಕೊಂಡು ವರದಿ ಸಲ್ಲಿಸಲು ಸೂಚಿಸಿರುತ್ತಾರೆ. ಈ ಬಗ್ಗೆ ಎದುರುದಾರರುಗಳು ಯಾವುದೇ ಕ್ರಮ ಜರುಗಿಸದೇ ಹಿರಿಯ ಅಧಿಕಾರಿಗಳ ಆದೇಶವನ್ನು ಉಲ್ಲಂಘಿಸಿರುತ್ತಾರೆ. ಆದ್ದರಿಂದ, ಎದುರುದಾರರುಗಳ ಮೇಲೆ ಕ್ರಮ ಜರುಗಿಸಬೇಕೆಂದು ಹಾಗೂ ಸರ್ಕಾರಕ್ಕೆ ಉಂಟಾಗಬಹುದಾದ ನಷ್ಟವನ್ನು ತಡೆಯಲು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, 1ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ. 2ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ, ತಾನು ಹಳ್ಳೂರ ಗ್ರಾಮ ಪಂಚಾಯತಿ ಕಛೇರಿಗೆ ಭೇಟಿ ಇತ್ತು, ನಂತರ

ಶ್ರೀ ಶಿವಪ್ಪ ಶೇತವ್ವ ಮಾದರ್ ಇವರ ಮನೆಗೆ ಭೇಟಿ ನೀಡಿ, ಸದರಿಯವರು ಸರ್ಕಾರಿ ಜಮೀನು ಒತ್ತುವರಿ ಮಾಡಿರುವ ಬಗ್ಗೆ ಸ್ಥಳ ಪರಿಶೀಲಿಸಿ ಹಳ್ಳೂರ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರಿಗೆ ಸದರಿ ಒತ್ತುವರಿ ಬಗ್ಗೆ ಸೂಕ್ತ ಕ್ರಮ ಜರುಗಿಸುವಂತೆ ತಿಳುವಳಿಕೆ ನೀಡಿರುತ್ತೇನೆಂದು ಹಾಗೂ ಅವರಿಂದ ವರದಿ ಬಂದ ನಂತರ ಕ್ರಮ ಜರುಗಿಸಲಾಗುವುದೆಂದು ತಿಳಿಸಿರುತ್ತಾರೆ.

3. ಈ ಹಂತದಲ್ಲಿ ವಿಜಾಪುರದ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಯವರಿಂದ ಆಸ್ತಿ ನಂ.416ರಲ್ಲಿನ ಸರ್ಕಾರಿ ಜಾಗವನ್ನು ಶ್ರೀ ಶಿವಪ್ಪ ಶೀತವ್ವ ಮಾದರ್ ಇವರು ಅತಿಕ್ರಮಣ ಮಾಡಿರುವ ಬಗ್ಗೆ ವರದಿ ಸಲ್ಲಿಸುವಂತೆ ಕೋರಲಾಗಿದ್ದು, ಅದರಂತೆ, ಸದರಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ದಿ:02/11/2016ರ ವರದಿಯನ್ನು ಸಲ್ಲಿಸಿರುತ್ತಾರೆ. ಅದರಲ್ಲಿ, ಮುದ್ದೇಬಿಹಾಳ್ ತಾಲ್ಲೂಕಿನ ಹಳ್ಳೂರ ಗ್ರಾಮದ ಶ್ರೀ ಶಿವಪ್ಪ ಶೀತವ್ವ ಮಾದರ ಇವರ ಪಕ್ಕದಲ್ಲಿನ ತಾರನಾಳ ರಸ್ತೆ ಹತ್ತಿರದ ಜಾಗವನ್ನು ಕಾನೂನುಬಾಹಿರವಾಗಿ ಅತಿಕ್ರಮಣ ಮಾಡಿರುವ ಬಗ್ಗೆ ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತಿ, ವಿಜಾಪುರ ಇವರು ತನಿಖೆ ನಡೆಸಿ ವರದಿ ಸಲ್ಲಿಸಿರುತ್ತಾರೆಂದು, ಸದರಿ ತನಿಖಾ ವರದಿಯಲ್ಲಿ ಶ್ರೀ ಶಿವಪ್ಪ ಶೀತವ್ವ ಮಾದರ ಇವರು ಹಳ್ಳೂರು ಗ್ರಾಮದಲ್ಲಿನ ಆಸ್ತಿ ನಂ. 416ರಲ್ಲಿಯ ಅತಿಕ್ರಮಣ ಮಾಡಿದ್ದ ಸರ್ಕಾರಿ ಜಾಗವನ್ನು ಡವಳಗಿ ಗ್ರಾಮ ಪಂಚಾಯತಿಯವರು ತಮ್ಮ ಸುಪರ್ದಿಗೆ ತೆಗೆದುಕೊಂಡು ಅಲ್ಲಿ ಅಂಗನವಾಡಿ ಕಟ್ಟಡ ಕಟ್ಟಲಿಕ್ಕೆ ದಿ: 17/06/2016 ರಂದು ಡವಳಗಿ ಗ್ರಾಮ ಸಭೆಯಲ್ಲಿ ಠರಾವು ಪಾಸು ಮಾಡಿರುತ್ತಾರೆಂದು ತಿಳಿಸಿರುತ್ತಾರೆ. ಸದರಿ ತನಿಖಾ ವರದಿಯ ಪ್ರತಿಯನ್ನು ಹಾಜರುಪಡಿಸಲಾಗಿದೆ. ಸದರಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಪತ್ರದ ಪ್ರತಿಯನ್ನು ಹಾಗೂ ತನಿಖಾ ವರದಿಯನ್ನು ದೂರುದಾರರಿಗೆ ರವಾನಿಸಿ ಅವರಿಂದ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿ ಡವಳಗಿ ಗ್ರಾಮ ಪಂಚಾಯತಿಯವರು ಅತಿಕ್ರಮಣ ಜಾಗವನ್ನು ತೆರವುಗೊಳಿಸದೆ ಅಲ್ಲಿ ಅಂಗನವಾಡಿ ಕಟ್ಟಡ ಕಟ್ಟಲಿಕ್ಕೆ ದಿ: 17/06/2016 ರಂದು ಗ್ರಾಮ ಸಭೆಯು ಠರಾವು ಪಾಸು ಮಾಡಿ ಸಲ್ಲಿಸಿರುವ ವರದಿಯು ಸಮಂಜಸವಲ್ಲ. ಈಗಾಗಲೇ ಅಂಗನವಾಡಿಗೆ ಕಟ್ಟಡ ಲಭ್ಯವಿರುತ್ತದೆ ಹಾಗೂ ಅತಿಕ್ರಮಣ ಜಾಗವು ಅಂಗನವಾಡಿ ಕಟ್ಟಡಕ್ಕೆ ಯೋಗ್ಯ ಸ್ಥಳವಾಗಿರುವುದಿಲ್ಲ. ಆದರೆ, ದೂರುದಾರರ ಸಮಾಜದವರಿಗೆ ಸಮಾಜ ಮಂದಿರ ಕಟ್ಟಲು ಸದರಿ ಜಾಗವನ್ನು ಕೊಡಿಸಿಕೊಡಬೇಕೆಂದು ಕೋರಿರುತ್ತಾರೆ. ಸದರಿ ದೂರುದಾರರ ಪ್ರತ್ಯುತ್ತರದ ಪ್ರತಿಯನ್ನು ಹಾಜರುಪಡಿಸಲಾಗಿದೆ.

4. ದೂರಿನಂಶಗಳನ್ನು ಎದುರುದಾರರ ಆಕ್ಷೇಪಣೆಯನ್ನು ಹಾಜರುಪಡಿಸಿರುವ ತನಿಖಾ ವರದಿಯನ್ನು ಪರಿಶೀಲಿಸಿದಲ್ಲಿ ಶ್ರೀ ಶಿವಪ್ಪ ಶೀತವ್ವ ಮಾದರ ಇವರು ಮುದ್ದೇಬಿಹಾಳ ತಾಲ್ಲೂಕಿನ ಡವಳಗಿ ಗ್ರಾಮ

ಪಂಚಾಯತಿ ವ್ಯಾಪ್ತಿಯಲ್ಲಿನ ಹಳ್ಳೂರು ಗ್ರಾಮದ ಆಸ್ತಿ ನಂ. 416 ರಲ್ಲಿಯ ಸರ್ಕಾರಿ ಜಾಗವನ್ನು ಅತಿಕ್ರಮಣ ಮಾಡಿರುವುದು ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತಿ, ವಿಜಯಪುರ ಇವರ ತನಿಖಾ ವರದಿಯಿಂದ ಹಾಗೂ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಪತ್ರದಿಂದ ಸ್ಪಷ್ಟ ಪಡುತ್ತದೆ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ. ಸದರಿ ತನಿಖಾ ವರದಿ ಹಾಗೂ ಡವಳಗಿ ಗ್ರಾಮ ಪಂಚಾಯತಿಯ ಗ್ರಾಮ ಸಭೆಯಲ್ಲಿ ಪಾಸು ಮಾಡಿರುವ ಠರಾವಿನ ಪ್ರತಿಯನ್ನು ಪರಿಶೀಲಿಸಿದಲ್ಲಿ ಹಳ್ಳೂರ ಗ್ರಾಮದ ಆಸ್ತಿ ನಂ. 416 ರಲ್ಲಿಯ ಶ್ರೀ ಶಿವಪ್ಪ ಶೀತವ್ವ ಮಾದರ ಅತಿಕ್ರಮ ಮಾಡಿರುವ ಜಾಗವನ್ನು ತೆರವುಗೊಳಿಸಿರುವುದು ಸ್ಪಷ್ಟ ಪಡುವುದಿಲ್ಲ ಹಾಗೂ ಸದರಿ ಅತಿಕ್ರಮಣ ಜಾಗವನ್ನು ಡವಳಗಿ ಗ್ರಾಮ ಪಂಚಾಯತಿಯವರು ಅಂಗನವಾಡಿ ಕೇಂದ್ರ ಕಟ್ಟಡ ನಿರ್ಮಾಣಕ್ಕಾಗಿ ಕಾಯ್ದಿರಿಸಿರುವುದು ಕಂಡು ಬರುತ್ತದೆ. ಸದರಿ ಡವಳಗಿ ಗ್ರಾಮ ಪಂಚಾಯತಿಯ ಠರಾವಿನ ಪ್ರತಿಯನ್ನು ಹಾಜರುಪಡಿಸಲಾಗಿದೆ.

5. ಇದಲ್ಲದೇ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ತಮ್ಮ ಪತ್ರದಲ್ಲಿ ಸದರಿ ಅತಿಕ್ರಮಿತ ಜಾಗದ ಅತಿಕ್ರಮಣವನ್ನು ತೆರವುಗೊಳಿಸಿ ಡವಳಗಿ ಗ್ರಾಮ ಪಂಚಾಯತಿಯವರು ತಮ್ಮ ಸುಪರ್ದಿಗೆ ತೆಗೆದುಕೊಂಡು ಅಲ್ಲಿ ಅಂಗನವಾಡಿ ಕಟ್ಟಡ ಕಟ್ಟಲಿಕ್ಕೆ ದಿ:17/06/2016 ರಂದು ಠರಾವು ಪಾಸು ಮಾಡಿರುತ್ತಾರೆಂದು ತಿಳಿಸಿರುತ್ತಾರೆ. ಹಾಗೆಯೇ ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಸದರಿ ಅತಿಕ್ರಮಿತ ಜಾಗವು ಇನ್ನೂ ಅತಿಕ್ರಮಣದಿಂದ ತೆರವುಗೊಂಡಿಲ್ಲವೆಂದು ತಿಳಿಸಿರುತ್ತಾರೆ. ಆದ್ದರಿಂದ, ಈ ಅಂಶವನ್ನು ಪರಿಶೀಲಿಸಿದಲ್ಲಿ ಅತಿಕ್ರಮಿತ ಜಾಗವನ್ನು ಡವಳಗಿ ಗ್ರಾಮ ಪಂಚಾಯತಿಯವರು ಅತಿಕ್ರಮಣವನ್ನು ತೆರವುಗೊಳಿಸಿ ತಮ್ಮ ಸುಪರ್ದಿಗೆ ಈವರೆಗೆ ತೆಗೆದುಕೊಂಡಿಲ್ಲವೆಂದು ಸ್ಪಷ್ಟ ಪಡುತ್ತದೆ. ಇದರಿಂದ, ಡವಳಗಿ ಗ್ರಾಮ ಪಂಚಾಯತಿಯವರು ದಿ:17/06/2016 ರಂದು ಅತಿಕ್ರಮಣವನ್ನು ತೆರವುಗೊಳಿಸಿ ಸದರಿ ಆಸ್ತಿ ನಂ. 416 ಜಾಗವನ್ನು ತಮ್ಮ ಸುಪರ್ದಿಗೆ ಪಡೆಯಲು ಠರಾವು ಪಾಸು ಮಾಡಿದ ನಂತರ ಮುಂದಿನ ಯಾವುದೇ ಕ್ರಮ ಜರುಗಿಸದೇ ಇರುವುದು ಕಂಡು ಬರುತ್ತದೆ. ಈ ಬಗ್ಗೆ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಣಾಧಿಕಾರಿ, ಡವಳಗಿ ಗ್ರಾಮ ಪಂಚಾಯತಿಗೆ ಸೇರಿದ ಜಾಗವು ಅತಿಕ್ರಮವಾಗಿರುವ ಬಗ್ಗೆ ತಿಳುವಳಿಕೆ ಇದ್ದರೂ ಅವರಾಗಲೀ ಅಥವಾ ಡವಳಗಿ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಯವರಾಗಲೀ ಕ್ರಮ ಜರುಗಿಸದೇ ಇರುವುದು ಕಂಡು ಬರುತ್ತದೆ.

6. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಡವಳಗಿ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿನ ಅತಿಕ್ರಮಿತ ಆಸ್ತಿ ಸಂ:416ರ ಸರ್ಕಾರಿ ಜಾಗವನ್ನು ಅತಿಕ್ರಮಣ ತೆರವುಗೊಳಿಸಿ ತಕ್ಷಣವೇ ಗ್ರಾಮ**

ಪಂಚಾಯತಿಯ ಸುಪರ್ದಿಗೆ ಪಡೆಯಲು ಕಾನೂನು ರೀತ್ಯ ಸೂಕ್ತ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ. ಈ ಬಗ್ಗೆ ಎರಡು ತಿಂಗಳೊಳಗೆ ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳಯೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಮೂರ್ತಿ ಎನ್.ಆನಂದ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು.